# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 39 | Pages. 2 | Date: 07-01-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 39 - ಪುಟಗಳು : 2 07-01-2026 ಬುಧವಾರ | Ph: 8762954248 | ದರ : ₹1


# ತೀರ್ಥಂಕರರ ಉಪದೇಶದಿಂದಷ್ಟೇ ಜೈನ ಧರ್ಮ ಉಳಿದಿಲ್ಲ

## ಡಾ. ಪಾದೂರು ಸುದರ್ಶನ ಅಭಿಮತ : 5ನೇ ಅರ್ಚಕ ಸಮ್ಮೇಳನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಜೈನ ಧರ್ಮ ಇಂದು ಜೀವಂತವಾಗಿ ಉಳಿದಿರುವುದಕ್ಕೆ ಕೇವಲ ತೀರ್ಥಂಕರರ ಉಪದೇಶ ಮಾತ್ರ ಕಾರಣವಲ್ಲ. ಅದನ್ನು ಸಂರಕ್ಷಿಸಿ, ಸಂಹಿತೆಗೊಳಿಸಿ, ಜೀವನೋಪಯೋಗಿಯಾಗಿ ರೂಪಿಸಿದ ಆಚಾರ್ಯಷಶಾಸ್ತ್ರಿ ಪರಂಪರೆ ಕಾರಣ ಎಂದು 5ನೇ ದಕ್ಷಿಣ ಭಾರತ ಅರ್ಚಕ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಪಾದೂರು ಸುದರ್ಶನ ಕುಮಾರ್ ಇಂದ್ರ ಹೇಳಿದರು.

ತಾಲ್ಲೂಕಿನ ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಜ. 6 ಮತ್ತು 7 ರಂದು ನಡೆಯುತ್ತಿರುವ 5ನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ಜೈನ ಸಿದ್ಧಾಂತಗಳಿಗೆ ಪೂರಕವಾದ ಶಾಶ್ವತ ಕೊಡುಗೆ ನೀಡಿದ ಆಚಾರ್ಯ ಪರಂಪರೆಯನ್ನು ಸ್ಮರಿಸಬೇಕು. ಅಹಿಂಸೆ, ಅಪರಿಗ್ರಹ ಮತ್ತು ಅನೇಕಾಂತದ ದಿವ್ಯ ಸಂದೇಶವನ್ನು ಲೋಕಕ್ಕೆ ನೀಡಿದ ತೀರ್ಥಂಕರ ಪರಂಪರೆಯ ಪುಣ್ಯಭೂಮಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ದಕ್ಷಿಣ ಭಾರತ ಮಟ್ಟದ ಜೈನ ಅರ್ಚಕ ಸಮ್ಮೇಳನಕ್ಕೆ ಸೇರಿರುವುದು ಅತ್ಯಂತ ಧನ್ಯತೆಯ ವಿಷಯವಾಗಿದೆ. ಜೈನ ಧರ್ಮವು ಸಂಯಮ, ಶ್ರದ್ಧೆ ಮತ್ತು ಶಾಸ್ತ್ರಾನುಸರಣೆಯ ಮೇಲೆ ನಿಂತ ಶಾಶ್ವತ ಧರ್ಮ. ಧರ್ಮದ ಆಚರಣಾತ್ಮಕ ರೂಪವನ್ನು ಸಮಾಜದೊಳಗೆ ಜೀವಂತವಾಗಿರಿಸುವ ಮಹತ್ತರ ಹೊಣೆಗಾರಿಕೆ ಹಾಗೂ ಜೈನ ಧರ್ಮದ ಜೀವಂತ ಹರಿವನ್ನು ಸಮಾಜದೊಳಗೆ ನಿರಂತರವಾಗಿ ಸಾಗಿಸುವಲ್ಲಿ ಪುರೋಹಿತ, ಪಂಡಿತ, ಅರ್ಚಕ, ಉಪಾಧ್ಯಾಯರ ಕೊಡುಗೆ ಸಾಕಷ್ಟಿದೆ ಎಂದರು.

### ಕರ್ನಾಟಕ ಪುಣ್ಯ ಪೀಠ

ಕರ್ನಾಟಕವು ಜೈನ ಧರ್ಮದ ಆಚಾರ್ಯ-ಶಾಸ್ತ್ರೀ ಪರಂಪರೆಯ ಮಹಾ ಪೀಠಭೂಮಿ ಆಗಿದೆ. ಶ್ರವಣಬೆಳಗೊಳದಲ್ಲಿ ಆರಂಭಗೊಂಡು ದಕ್ಷಿಣ ಭಾರತಕ್ಕೆ ವಿಸ್ತರಿಸಿ ಬೆಳೆದು ನಿಂತಿದೆ. ಜೈನ ಆಚಾರ್ಯರು, ಯತಿಗಳು, ಶಾಸ್ತ್ರಿಗಳು ಕರ್ನಾಟಕದ ಧಾರ್ಮಿಕ-ಸಾಂಸ್ಕೃತಿಕ ಇತಿಹಾಸವನ್ನು ರೂಪಿಸಿದ್ದಾರೆ. ಕ್ರಿ.ಪೂ. 3ನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯ ಹಾಗೂ ಭದ್ರಬಾಹು ಆಚಾರ್ಯರು ಶ್ರವಣಬೆಳಗೊಳಕ್ಕೆ ಆಗಮನ ಮಾಡಿದ ನಂತರ ಕರ್ನಾಟಕ ಜೈನ ಧರ್ಮದ ಕೇಂದ್ರವಾಗಿ, ದಿಗಂಬರ ಜೈನ ಆಚಾರ್ಯ ಪರಂಪರೆ ಬೆಳೆದು ಬಂದಿತು ಎಂದರು.

ಕುಂದ ಕುಂದಾಚಾರ್ಯರು ಸಮಯಸಾರ, ಪ್ರವಚನಸಾರ, ನಿಯಮಸಾರ ಕೃತಿಗಳನ್ನು ರಚನೆ ಮಾಡಿ ದಿಗಂಬರ ತತ್ತ್ವಶಾಸ್ತ್ರವನ್ನು ಶಿಖರಕ್ಕೆ ಏರಿಸಿದವರು. ಸಮಂತಭದ್ರಾಚಾರ್ಯರು ರತ್ನಕರಂಡಕ ಶ್ರಾವಕಾಚಾರ ಕೃತಿಯ ಮೂಲಕ ಭಕ್ತಿ ಮತ್ತು ತರ್ಕ ಎರಡರ ಸಂಯೋಜನೆ ಮಾಡಿ ಕರ್ನಾಟಕದಲ್ಲಿ ಶ್ರಾವಕ ಸಂಸ್ಕಾರ



ಪದ್ಧತಿಗೆ ದಿಕ್ಕನ್ನು ನೀಡಿದವರು.

ಹಳಗನ್ನಡದ ಕವಿಗಳು ಹೆಚ್ಚಿನವರು ಜೈನ ಪುರೋಹಿತ ವರ್ಗದಿಂದ ಬಂದವರು. ಇವರು ಕೇವಲ ಪೂಜಾ ವಿಧಿ-ವಿಧಾನಗಳಲ್ಲದೆ ಸಂಸ್ಕೃತ ಮತ್ತು ಪ್ರಾಕೃತದಲ್ಲಿದ್ದ ಆಗಮುಗಳನ್ನು ಕನ್ನಡಕ್ಕೆ ಸರಳೀಕರಿಸಿ ಜನ ಸಾಮಾನ್ಯರಿಗೆ ತಲುಪಿಸಿದರು. ಬಸದಿಗಳಲ್ಲಿರುವ ಅಮೂಲ್ಯ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬಂದ ಕೀರ್ತಿ ನಮ್ಮ ಅರ್ಚಕ ಪರಂಪರೆಗೆ ಸಲ್ಲುತ್ತದೆ. ಇದನ್ನು ಅರಿತು, ಅನುಸರಿಸಿ, ಮುಂದಿನ ಪೀಳಿಗೆಗೆ ಹರಿಸುವುದು ಮುನಿ ಮಹಾರಾಜರ, ಭಟ್ಟಾರಕರ, ವಿದ್ವಾಂಸರ, ಪಂಡಿತರ ಹಾಗೂ ಅರ್ಚಕಷಶಾಸ್ತ್ರಿಗಳ ಧರ್ಮವಾಗಿದೆ ಎಂದರು.

ಜೈನ ಧರ್ಮದಲ್ಲಿ ಅರ್ಚಕ ಅಥವಾ ಇಂದ್ರ ಎಂಬ ಪದವು ಕೇವಲ ವೃತ್ತಿಯಲ್ಲ, ಅದೊಂದು ಪವಿತ್ರ ಜವಾಬ್ದಾರಿ. ಪುರಾಣಗಳ ಪ್ರಕಾರ, ಭಗವಾನ್ ಆದಿನಾಥರ ಕಾಲದಲ್ಲಿಯೇ ಸಮಾಜದ ಶಿಸ್ತು ಮತ್ತು ಧಾರ್ಮಿಕ ವಿಧಿಗಳನ್ನು ನಡೆಸಿಕೊಡಲು ಟಿಕುಲಕರಟಿರ ವ್ಯವಸ್ಥೆ ಇತ್ತು. ಇಂದ್ರನ ಸಾಂಕೇತಿಕತೆಯಾಗಿ, ಪಂಚಕಲ್ಯಾಣಕಗಳಲ್ಲಿ ಸೌಧರ್ಮೇಂದ್ರನು ಹೇಗೆ ತೀರ್ಥಂಕರರ ಸೇವೆಯನ್ನು ಮಾಡುತ್ತಾನೋ, ಹಾಗೆಯೇ ಭೂಮಿಯ ಮೇಲೆ ಜಿನಾಲಯಗಳಲ್ಲಿ ದೇವರ ಪೂಜೆ ಮಾಡುವ ಅರ್ಚಕರನ್ನು ಟಿಇಂದ್ರಟಿ ಎಂದು ಕರೆಯಲಾಗುತ್ತದೆ: ಸಮಾಜಕ್ಕೆ ಹಿತವನ್ನು ಬಯಸುವವನೇ ಟಿಪುರೋಹಿತಟಿ. ಜಿನವಾಣಿಯನ್ನು ಅಭ್ಯಾಸ ಮಾಡಿ ಶ್ರಾವಕರಿಗೆ ಬೋಧಿಸುವವರು ಟಿಉಪಾಧ್ಯಾಯಟಿ ಅಥವಾ ಟಿಪಂಡಿತಟಿ. ಮುನಿಗಳು ಆತ್ಮಕಲ್ಯಾಣಕ್ಕಾಗಿ ತಪಸ್ಸು ಮಾಡಿದರೆ, ಅರ್ಚಕರು ಸಂಸಾರಿಗಳಾದ ಶ್ರಾವಕರಿಗೆ ಧರ್ಮದ ಹಾದಿಯನ್ನು ತೋರಿಸುವ ಮಾರ್ಗದರ್ಶಕರು.

### ಜೈನ ಪುರೋಹಿತರಿಗೆ ಆದಾಯ ಇಲ್ಲ

ಇಂದು ಪೌರೋಹಿತ್ಯ ಎಲ್ಲೆಡೆ ತಿರಸ್ಕಾರಕ್ಕೆ ಒಳಗಾಗಿದೆ. ಇವರ ಜೀವನೋಪಾಯಕ್ಕೆ ಬೇಕಾದ ಆದಾಯವಿಲ್ಲದೆ, ಜೈನ ಪುರೋಹಿತರು ತಮ್ಮ ವೃತ್ತಿಯನ್ನು ತೊರೆದು ಲೌಕಿಕ ವಿದ್ಯಾವಂತರಾಗಿ, ಸರ್ಕಾರಿ ಹಾಗೂ ಖಾಸಗಿ ಹುದ್ದೆಗಳಿಗೆ ಸೇರುತ್ತಿರುವುದನ್ನು ಕಾಣಬಹುದು. ಪುರೋಹಿತ ವರ್ಗ ತನ್ನ ವೃತ್ತಿಯನ್ನು ತೊರೆದರೆ, ಜಿನಾಲಯಗಳು ಇನ್ನೂ ಹೀನಸ್ಥಿತಿಗೆ ಬರುವ ಸಾಧ್ಯತೆಗಳಿವೆ. ಒಬ್ಬ ಪುರೋಹಿತ ಅನೇಕ ಬಸದಿಗಳಲ್ಲಿ ಪೂಜೆ ಮಾಡುವ ಪರಿಸ್ಥಿತಿ ಬಂದೊದಗಿದೆ. ಶ್ರಾವಕರಿಲ್ಲದೆ ಅಥವಾ ಇವರ ಅನಾಸಕ್ತಿಯ ಕಾರಣದಿಂದ ನಿತ್ಯಪೂಜೆಗಳನ್ನು ನೋಡುವವರಿಲ್ಲದ ಸ್ಥಿತಿಗಳಿವೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರದ ಸಹಾಯದೊಂದಿಗೆ ನಾಡಿನ ಅನೇಕ ಜಿನಮಂದಿರಗಳ ಜೀರ್ಣೋದ್ಧಾರದ ಕಾರ್ಯಗಳು ಜರುಗಿವೆ. ವೈಭಯುತವಾದ



ಪಂಚಕಲ್ಯಾಣ ಮಹೋತ್ಸವಗಳು ಸಂಪನ್ನಗೊಂಡಿದೆ. ಹೊಸ ಕ್ಷೇತ್ರಗಳ ನಿರ್ಮಾಣಗಳಾಗುತ್ತಲಿದೆ. ಆದರೆ ಅರ್ಚಕರ ಕುರಿತಾದ ಯೋಜನೆ ಹಾಗೂ ಯೋಚನೆಗಳನ್ನು ಸಮಾಜ ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ಸರ್ಕಾರ ಪುರೋಹಿತರಿಗೆ ಜೀವನ ನಿರ್ವಹಣೆಯ ಭತ್ಯೆಯ ಸೌಲಭ್ಯವನ್ನು ಕರ್ನಾಟಕದಲ್ಲಿ ಜಾರಿ ಮಾಡಿದ್ದರೂ, ಆಡಳಿತ ಮಂಡಳಿಯನ್ನು ನಿಯಮಾನುಸಾರ ನೋಂದಣಿ ಮಾಡದೆ, ಪುರೋಹಿತರು ಸೌಲಭ್ಯಗಳಿಂದ ವಂಚಿತರಾಗಿರುವುದನ್ನು ಗಮನಿಸಬಹುದು.

ಪೂಜೆ ಮಾಡುವವರೂ ಮಾಡಿಸುವವರೂ ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದರೆ ಮಾತ್ರ ಅದರಿಂದ ನಾಡಿಗೆ ಶ್ರೇಯೋಭಿವೃದ್ಧಿ ಸಾಧ್ಯ. ದೇವಸ್ಥಾನ, ಮಂದಿರಗಳ ಜೀರ್ಣೋದ್ಧಾರದ ಜೊತೆಗೆ ಅರ್ಚಕರಿಗೆ ತರಬೇತಿ, ಅವರಿಗೆ ಸೂಕ್ತ ಸೌಕರ್ಯ ಸೌಲಭ್ಯಗಳನ್ನು ಒದಗಿಸುವುದೂ ಅತ್ಯಾವಶ್ಯಕವಾಗಿದೆ ಎಂದು ಹೇಳಿದರು.

ಪುರೋಹಿತರ ಕರ್ತವ್ಯ, ಕೌಶಲ್ಯವೃದ್ಧಿ ಹಾಗೂ ಶ್ರೇಯೋಭಿವೃದ್ಧಿಯಲ್ಲಿ ಮಠ ಮಾನ್ಯಗಳ ಪಾತ್ರ ಗಣನೀಯವಾಗಿದೆ. ಭಟ್ಟಾರಕರು ತಮ್ಮ ಸೀಮೆಯ ವ್ಯಾಪ್ತಿಗೆ ಸಂಬಂಧಿಸಿದ ಬಸದಿಗಳ ಆಡಳಿತ ಮಂಡಳಿಗಳ ಸಭೆಯನ್ನು ಕಾಲ ಕಾಲಕ್ಕೆ ನಡೆಸಿ, ಪ್ರಾಥಮಿಕ ಮಾಹಿತಿಗಳನ್ನು ಕಲೆಹಾಕಿ, ವಸ್ತುಸ್ಥಿತಿಯನ್ನು ತಿಳಿದುಕೊಳ್ಳುವುದು. ಆಡಳಿತ ಮಂಡಳಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುವುದರ ಮೂಲಕ ಅರ್ಚಕರ ಆರ್ಥಿಕ ಸ್ಥಿತಿ ಹಾಗೂ ಸೌಲಭ್ಯಗಳನ್ನು ಉತ್ತಮ ಗೊಳಿಸುವಲ್ಲಿ ಕ್ರಿಯಾಶೀಲರಾಗಬೇಕಾಗಿ ಒತ್ತಾಯಿಸುತ್ತೇನೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಜೈನ ಮಂದಿರಗಳಲ್ಲಿ ನಿತ್ಯ ಪೂಜೆ ಮಾಡುವ ಜತೆಗೆ ಸಮಾಜದಲ್ಲಿ ಜನರಿಗೆ ಉತ್ತಮ ಸಂಸ್ಕಾರ, ಸನ್ಮಾರ್ಗದತ್ತ ತೆಗೆದುಕೊಂಡು ಹೋಗುವ ಕಾರ್ಯ ಮಾಡುತ್ತಿರುವ ಅರ್ಚಕರ ಕೊಡುಗೆ ಅಪಾರವಿದೆ. ಬೆಳೆ-ಮಳೆ ಕಡಿಮೆ ಆದಾಗಲೂ ನಾವೆಲ್ಲಾ ಅರ್ಚಕರಿಂದ ಪೂಜೆ ಮಾಡಿಸುತ್ತೇವೆ.

ಲೋಕಕಲ್ಯಾಣಕ್ಕಾಗಿ ನಿತ್ಯ ಪೂಜೆ, ಸಮಾಜ ತಿದ್ದುವುದರಲ್ಲಿಯೂ ಅರ್ಚಕರ ಕಾರ್ಯ ಅನನ್ಯವಾಗಿದೆ ಎಂದು ಹೇಳಿದರು.ಪುರಾತನ ಕಾಲದಿಂದಲೂ ಜೈನ ಧರ್ಮಕ್ಕೆ ತನ್ನದೇ ಇದೆ ಧಾರ್ಮಿಕ ಶಕ್ತಿ ತತ್ವ ಆದರ್ಶ ಇದೆ. ಸರ್ವರನ್ನು ಗೌರವಿಸುವ ಸರ್ವರಿಗೂ ಶಕ್ತಿ ತುಂಬವ ಧರ್ಮ ಎಂದರೆ ಅದು ಜೈನಧರ್ಮ ಎಂದರು. ಜಗತ್ತಿನಲ್ಲಿ ಶ್ರವಣಬೆಳಗೊಳ ಕ್ಷೇತ್ರವು ಕೊಟ್ಯಂತರ ಜನರಿಗೆ ಒಳ್ಳೆಯ ದಿಕ್ಕಿನಲ್ಲಿ ಸಾಗುವಂತೆ ಆಶೀರ್ವಾದ ಮಾಡಿದೆ. ದೇವರು ಸ್ವರೂಪದ ಕರ್ಮಯೋಗಿ ದಿವಂಗತ ಚಾರುಕೀರ್ತಿ ಭಟ್ಟಾರಕರು ಶ್ರವಣಬೆಳಗೊಳ ಕ್ಷೇತ್ರವನ್ನು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕವಾಗಿ ಬೆಳೆಸುವದರೊಂದಿಗೆ ಜಗತ್ತಿಗೆ ಪರಿಯಚಯಿಸಿದರು ಎಂದು ಸ್ಮರಿಸಿದರು.

ಶ್ರವಣಬೆಳಗೊಳ ದಿಗಂಬರ ಜೈನ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶಿವಮೊಗ್ಗ ಜಿಲ್ಲೆಯ ಹೊಂಬುಜ ಜೈನ ಮಠದ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು ಸಾನ್ನಿಧ್ಯ ವಹಿಸಿದ್ದರು.

ದಕ್ಷಿಣ ಭಾರತ ಜೈನ ಅರ್ಚಕರ ಸಂಘದ ಅಧ್ಯಕ್ಷ ಎಸ್.ಎಂ.ಸನ್ಮತಿಕುಮಾರ್, ಪ್ರಧಾನ ಕಾರ್ಯದರ್ಶಿ ಡಾ. ಎಚ್.ಪಿ.ಮೋಹನಕುಮಾರ ಶಾಸ್ತ್ರಿ, ಕಾರ್ಯಾಧ್ಯಕ್ಷ ತವನಪ್ಪ ಪಂಡಿತ, ನಿಕಟಪೂರ್ವ ಅಧ್ಯಕ್ಷ ಶಾಂತಿನಾಥ ಪಾರ್ಶ್ವನಾಥ ಉಪಾಧ್ಯೆ, ಶೀಲಾ ಅನಂತರಾಜ್, ಜಿ.ಪಿ.ಪದ್ಮಕುಮಾರ್ ಮುಂತಾದವರಿದ್ದರು.

---

# ಅಪ್ರಾಪ್ತರು ವಾಹನ ಓಡಿಸುವುದು ಶಿಕ್ಷಾರ್ಹ ಅಪರಾಧ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: 18 ವರ್ಷ ತುಂಬಿರದ ಮಕ್ಕಳಿಗೆ ಪಾಲಕರು ದ್ವಿಚಕ್ರ ಹಾಗೂ ಇತರೆ ವಾಹನಗಳನ್ನು ಓಡಿಸಲು ನೀಡುವುದು ಅಕ್ಷಮ್ಯ ಅಪರಾಧ ಎಂದು ಹಿರೀಸಾವೆ ಪಿಎಸ್ಐ ರೂಪದೇವಿ ಬಿರಾದರ್ ಹೇಳಿದರು.

ತಾಲೂಕಿನ ಹಿರೀಸಾವೆ ಗ್ರಾಮದ ಪಿಎಂಶ್ರೀ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿ, ಸಂಚಾರಿ ನಿಯಮಗಳನ್ನು ಪಾಲಿಸುವುದು ಕಡ್ಡಾಯ ಎಂದರು.

ವಾಹನ ಯಾವುದೇ ಇರಲಿ ಅಗತ್ಯ ದಾಖಲಾತಿಗಳನ್ನು ಹೊಂದಿರಬೇಕು. ಅಪಘಾತಗಳು ನಡೆದ ಸಂದರ್ಭದಲ್ಲಿ ಕಾನೂನು ಹೋರಾಟ ಹಾಗೂ ನಷ್ಟದ ಪರಿಹಾರಕ್ಕೆ ಅನುಕೂಲವಾಗಲಿದೆ. ಕಾನೂನು ತೊಡಕು ಎದುರಾಗುವುದಿಲ್ಲ



ಎಂದು ತಿಳಿಸಿದರು.

ದ್ವಿಚಕ್ರ ವಾಹನಗಳ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿದ್ದು ಸಂಚಾರಿ ನಿಯಮಗಳನ್ನು ಪಾಲಿಸದಿದ್ದರೆ ದಂಡ ಕಟ್ಟಬೇಕಾಗುತ್ತದೆ. ಅನಿವಾರ್ಯ ಅಪಘಾತ ಸಂಭವಿಸಿದರೆ ಜೀವ ಕಳೆದುಕೊಳ್ಳುವ ಸನ್ನಿವೇಶ ಎದುರಾಗಲಿದೆ. ಇದರಿಂದ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ ಎಂದು ಎಚ್ಚರಿಸಿದರು.

ಮನೆಯಿಂದ ಶಾಲೆಗೆ ಹಾಗೂ ಶಾಲೆಯಿಂದ ಮನೆಗೆ ತೆರಳುವಾಗ ರಸ್ತೆಯ ಎಡ ಬದಿಯಲ್ಲಿಯೇ ನಡೆದು ಸಾಗಬೇಕು. ರಸ್ತೆ ದಾಟುವ ವೇಳೆ ರಸ್ತೆಯ ಎರಡೂ ಕಡೆಗೆ ನೋಡಿ ಗಮನಿಸುವುದು ಸೂಕ್ತ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶೈಕ್ಷಣಿಕ ಹಂತದಲ್ಲಿ ವಿದ್ಯಾರ್ಥಿಗಳು ಓದಿನತ್ತ ಹೆಚ್ಚು ಗಮನ ಹರಿಸಬೇಕು. ಪಾಲಕರು ಸಹ ಮಕ್ಕಳ ದೈನಂದಿನ ಚಟುವಟಿಕೆಯ ಮೇಲೆ ಕಣ್ಣಾಡಿಸಬೇಕು. ಮಕ್ಕಳನ್ನು ಟಿವಿ ವೀಕ್ಷಣೆ ಹಾಗೂ ಮೊಬೈಲ್ ಬಳಕೆಯಿಂದ ದೂರ ಇರಿಸಬೇಕು. ವಾಹನಗಳನ್ನು ಚಾಲನೆ ಮಾಡಿಸುವ ಪ್ರಯತ್ನ ಮಾಡಬಾರದು. ಇವುಗಳಿಂದ ದೂರವಿದ್ದಷ್ಟು ಮಕ್ಕಳು ಸುರಕ್ಷತೆಯೊಂದಿಗೆ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕಿ ಉಮಾ, ಧರ್ಮೇಶ್. ಎಲ್.ಎಸ್, ಯೋಗೇಶ್, ದೇವಕಿ, ಎನ್.ಜಿ.ಶೋಭ,ವಿನಯ ಎಂ.ಗುನಗ, ಎಂ.ಬಿ.ಗೌರಮ್ಮ, ಆರ್.ಶೋಭ, ಶ್ವೇತಾ ಹಾಗೂ ವಿದ್ಯಾರ್ಥಿಗಳು ಇದ್ದರು.

---

# ಸತ್ತಿಗರಹಳ್ಳಿ ಕೊಪ್ಪಲಿನಲ್ಲಿ ಅಂಗನವಾಡಿ ಕಟ್ಟಡ ಉದ್ಘಾಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಕಟ್ಟಾಯ: ಹೋಬಳಿಯ ಅಂಕಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸತ್ತಿಗರಹಳ್ಳಿ ಕೊಪ್ಪಲಿನಲ್ಲಿ ಶಾಸಕ ಸಿಮೆಂಟ್ ಮಂಜು ನೂತನ ಅಂಗನವಾಡಿ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ನರೇಗಾ ಯೋಜನೆಯಡಿ 13 ಲಕ್ಷ ರೂ. ವೆಚ್ಚದ ಅಂಗನವಾಡಿ ಹಾಗೂ ರಾಷ್ಟ್ರೀಯ ಪೋಷಣ ಮಾಸಾಚರಣೆ ಕಾರ್ಯಕ್ರಮದ ಕಾರ್ಲೆ ವಲಯದ ಪೌಷ್ಟಿಕ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳ ಆರೋಗ್ಯವನ್ನು ಸುಧಾರಿಸಲು, ಅಪೌಷ್ಟಿಕತೆ ನಿವಾರಿಸಲು ಮತ್ತು ಪೌಷ್ಟಿಕಾಂಶಗಳ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸುವ ಒಂದು ಕಾರ್ಯಕ್ರಮವಾಗಿದೆ. ಗ್ರಾಮೀಣ ಭಾಗದ ಗರ್ಭಿಣಿಯರು ಸತ್ವಯುತ




ಆಹಾರ ಸೇವನೆಯಿಂದ ಮುಂದೆ ಜನಿಸುವ ಮಗುವಿಗೆ ಮತ್ತು ತಾಯಿಗೆ ಒಳ್ಳೆಯದಾಗುತ್ತದೆ.

ಈ ಕುರಿತಂತೆ ಗರ್ಭಿಣಿ ಮಹಿಳೆಯರಿಗೆ ಸೂಕ್ತ ಮಾರ್ಗದರ್ಶನ ನೀಡುವ ಮಹತ್ತರ ಜವಾಬ್ದಾರಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೇಲಿದೆ ಎಂದು ತಿಳಿಸಿದರು.

ಶಿಕ್ಷಣ ಮತ್ತು ಆರೋಗ್ಯ ಎರಡೂ ಮುಖ್ಯ. ಆರೋಗ್ಯಕರ ದೇಹ ಮತ್ತು ಮನಸ್ಸಿನಿಂದ ಮಾತ್ರ ಶಿಕ್ಷಣದ ಲಾಭ ಪಡೆಯಲು ಮತ್ತು ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ. ಶಿಕ್ಷಣವು ಜ್ಞಾನ ಮತ್ತು ಕೌಶಲ್ಯಗಳನ್ನು ನೀಡಿದರೆ, ಆರೋಗ್ಯವು ಆ ಕೌಶಲ್ಯಗಳನ್ನು ಬಳಸಿಕೊಳ್ಳಲು ಶಕ್ತಿ ನೀಡುತ್ತದೆ.

ಇವೆರಡೂ ದೇಶದ ಅಭಿವೃದ್ಧಿಗೆ ಮೂಲಾಧಾರಗಳು, ಆರೋಗ್ಯ ಶಿಕ್ಷಣವು ಉತ್ತಮ ಜೀವನಶೈಲಿ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ ಎಂದರು.


ಮುಕ್ಕುಂದೂರು ಮಠದ ಶ್ರೀ ಮಹಾಂತೇಶ ಸ್ವಾಮೀಜಿ ಮಾತನಾಡಿ, ಜನಪ್ರತಿನಿಧಿಗಳು, ಅಧಿಕಾರಿಗಳು ಜನರ ಸೇವೆಯನ್ನು ಜನಾರ್ದನ ಸೇವೆ ಎಂದು ತಿಳಿದು ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

ಈ ನಿಟ್ಟಿನಲ್ಲಿ ಶಾಸಕ ಸಿಮೆಂಟ್ ಮಂಜು ನಿರಂತರ ಜನರೊಟ್ಟಿಗೆ ಬೆರೆತು, ಸಾರ್ವಜನಿಕರಿಗೆ ಸ್ಪಂದಿಸುತ್ತಿರುವ ಗುಣ ಶ್ಲಾಘನೀಯ. ಶಾಸಕರಿಗೆ ದೇವರು ಮತ್ತಷ್ಟು ಶಕ್ತಿ ನೀಡಿ ಜನರ ಕಷ್ಟಕ್ಕೆ ಸಂಜೀವಿನಿಯಾಗಲಿ ಎಂದು ಹಾರೈಸಿದರು.

ಗ್ರಾಪಂ ಅಧ್ಯಕ್ಷೆ ರಾಜಮ್ಮ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಿರೀಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಜ್ಯೋತಿಲಕ್ಷ್ಮೀ, ಕಾರ್ಲೆ ಆಸ್ಪತ್ರೆ ವೈದ್ಯ ಡಾ. ತೇಜಸ್ವಿ, ಪಿಡಿಒ ಸುರೇಶ್, ಮುಖಂಡರಾದ ಚನ್ನಕೇಶವ ಗೌಡ, ನಿಸರ್ಗ ಸತೀಶ್ ಹರೀಶ್, ನಿತಿನ್ ಉಡುವಾರೆ, ಪ್ರದೀಪ್, ಗಿರಿತೇಜ, ದಯಾನಂದ ಇತರರಿದ್ದರು.

---

# ಅಪರಿಚಿತ ವಾಹನ ಡಿಕ್ಕಿ: ಚಿರತೆ ಸಾವು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಗುಲಸಿಂದ ಗ್ರಾಮದ ಬಳಿ ಬೆಂಗಳೂರು-ಹಾಸನ ರಾಷ್ಟ್ರೀಯ ಹೆದ್ದಾರಿ 75ರ ಬೈಪಾಸ್ ರಸ್ತೆಯಲ್ಲಿ ಅಪರಿಚಿತ ವಾಹನ ಡಿಕ್ಕಿಯಾಗಿ ಚಿರತೆ ಮೃತಪಟ್ಟಿದೆ.

ಸುಮಾರು 3 ರಿಂದ 4 ವರ್ಷ ವಯಸ್ಸಿನ ಗಂಡು ಚಿರತೆ ಇದಾಗಿದೆ. ಮಂಗಳವಾರ ಬೆಳಗಿನ ಜಾವ ಆಹಾರ ಹುಡುಕುತ್ತಾ ಇಲ್ಲವೇ ಮತ್ತೊಂದೆಡೆಗೆ ಸಾಗಲೆಂದು ಹೊರಟಿರುವ ಚಿರತೆಯು ರಸ್ತೆ ದಾಟುವ ವೇಳೆ ಅಪರಿಚಿತ ವಾಹನ ಡಿಕ್ಕಿಯಾಗಿದೆ.

ಬೆಳಿಗ್ಗೆ 8 ಗಂಟೆಗೆ ಸಮಯದಲ್ಲಿ ಸ್ಥಳೀಯರು ಪೊಲೀಸ್ ಠಾಣೆ ಮತ್ತು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಪರಿಶೀಲಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ನಂತರ ಅಂತ್ಯಕ್ರಿಯೆ ನೆರವೇರಿಸಲಾಯಿತು.

---

# ದೇಶ ರಕ್ಷಣೆಯಲ್ಲಿ ಸೈನಿಕರ ಕೊಡುಗೆ ಅಪಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ದೇಶದ ನಾಗರಿಕರ ಸುರಕ್ಷತೆಗೆ ಶ್ರಮಿಸುತ್ತಿರುವ ಸೈನಿಕರ ಕೊಡುಗೆ ಅವಿಸ್ಮರಣೀಯ ಎಂದು ಡಿವೈಎಸ್ಪಿ ಬಿ.ಆರ್. ಗೋಪಿ ಹೇಳಿದರು.

ನಗರ ಹೊರವಲಯದಲ್ಲಿ ಹಮ್ಮಿಕೊಂಡಿದ್ದ ಸೈನಿಕರ ಕುಟುಂಬ ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ, ಗಡಿ ಕಾಯುವ ಯೋಧರ ಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ನೆಮ್ಮದಿಯ ಜೀವನ ನಡೆಸಲು ಸೈನಿಕರು ಕಾರಣ ಎಂಬುದನ್ನು ಮರೆಯಬಾರದು. ಸುರಕ್ಷಿತ ಜೀವನಕ್ಕೆ ಆಸರೆಯಾಗಿ ಸೇವೆ ಸಲ್ಲಿಸುತ್ತಿರುವ ಹೆಮ್ಮೆಯ ಸೇನಾನಿಗಳಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಮಕ್ಕಳ ವಿದ್ಯಾಭ್ಯಾಸದತ್ತ ಪಾಲಕರು ಕಾಳಜಿ ವಹಿಸಬೇಕು. ಆರೋಗ್ಯ ರಕ್ಷಣೆಗೆ ಗಮನ ಹರಿಸಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಅಗತ್ಯ ಯೋಜನೆ ಸಿದ್ದಪಡಿಸಿ ಕಾರ್ಯ ರೂಪಕ್ಕೆ ತರಬೇಕು.



ಹದಿನೈದು ವರ್ಷ ಭಾರತೀಯ ಸೇನೆಯಲ್ಲಿ ಸಲ್ಲಿಸಿದ ಅನುಭವಗಳನ್ನು ಹಂಚಿಕೊಂಡರು. ನಿವೃತ್ತ ಸೈನಿಕರ ಸಂಘದ ಅಧ್ಯಕ್ಷ ಚಂದ್ರಪ್ಪ ಮಾತನಾಡಿ, ಪ್ರತಿ ವರ್ಷ ಕುಟುಂಬ ಸದಸ್ಯರು ಜತೆಗೂಡಿ ಕುಟುಂಬ ಮಿಲನ ಕಾರ್ಯಕ್ರಮ ಆಯೋಜನೆ ಮಾಡುತ್ತಿದ್ದೇವೆ. ಬದುಕಿನ ಕಷ್ಟ, ಸುಖ ಹಂಚಿಕೊಳ್ಳಲು ಅತ್ಯುತ್ತಮ ವೇದಿಕೆ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಹಬ್ಬನಘಟ್ಟ ನವೀನ್ ಕುಮಾರ್, ಗೌರವಾಧ್ಯಕ್ಷ ಲಕ್ಷ್ಮಣ್, ಜಿಲ್ಲಾಧ್ಯಕ್ಷ ಪ್ರದೀಪ್ ಸಾಗರ್, ಉಪಾಧ್ಯಕ್ಷ ವೆಂಕಟೇಶ್, ಜಿಲ್ಲಾ ನಿವೃತ್ತ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ನಾಗರಾಜ್, ಗೌರವಾಧ್ಯಕ್ಷ ಬೆಟ್ಟೇಗೌಡ, ನಿರ್ದೇಶಕ ಮಹೇಶ್, ಕಲ್ಯಾಣಪ್ಪ, ಹುಲಿಗೌಡ್ರು, ಪ್ರದೀಪ್, ಸುರೇಶ್ ಇತರಿದ್ದರು.

---

# ಜ.10ಕ್ಕೆ ಸೌಹಾರ್ದ ಭಾರತ-ಸಮಾನತೆಯ ಸ್ನೇಹಿತ ಪುಸ್ತಕ ಬಿಡುಗಡೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸೌಹಾರ್ದ ಕರ್ನಾಟಕ ಮತ್ತು ಜನಪರ ಚಳವಳಿಗಳ ಒಕ್ಕೂಟದ ವತಿಯಿಂದ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಅವರ ಸೌಹಾರ್ದ ಭಾರತ ಸಮಾನತೆಯ ಸ್ನೇಹಿತ ಕೃತಿಯ ಜನಾರ್ಪಣೆ ನಗರದ ಶ್ರಮ ಕಚೇರಿಯಲ್ಲಿ ಜ.10ರ ಸಂಜೆ 4.30ಕ್ಕೆ ನಡೆಯಲಿದೆ ಎಂದು ಸಂವಿಧಾನ ಓದು ಅಭಿಯಾನ ಕರ್ನಾಟಕ ರಾಜ್ಯ ಆಯೋಜಕ ರಾಜು ಗೊರೂರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಏಕ ಕಾಲದಲ್ಲಿ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಲೇಖಕಿ ಹಾಗೂ ಮಹಿಳಾ ಪರ ಹೋರಾಟಗಾರ್ತಿ ರೂಪಾ ಹಾಸನ ಅಧ್ಯಕ್ಷತೆ ವಹಿಸುವರು. ಸಿಐಟಿಯು ರಾಜ್ಯ ಉಪಾಧ್ಯಕ್ಷ ಧರ್ಮೇಶ್ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಕೃತಿ ಕುರಿತು




ವಿಜ್ಞಾನ ಬರಹಗಾರರಾದ ಅಹಮದ್ ಹಗರೆ ಮಾತನಾಡುವರು ಎಂದರು.

ಸಮಾಜ ಸೇವಕರಾದ ಜಿ.ಟಿ.ವೆಂಕಟೇಶ್, ಅಲ್ಪಸಂಖ್ಯಾತರ ಮುಖಂಡರಾದ ಇರ್ಷಾದ್ ಅಹಮದ್ ದೇಸಾಯಿ, ವೆಸ್ಲಿ ಚರ್ಚ್‌ನ ಮಾಜಿ ಕಾರ್ಯದರ್ಶಿ ಶಾಡ್ರಕ್ ಮೊದಲಾದವರು ಉಪಸ್ಥಿತರಿರುವರು. ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಎಂ.ಜಿ. ನಿರ್ವಹಣೆ ಮಾಡಲಿದ್ದಾರೆ ಎಂದು ಹೇಳಿದರು.

ಅಲ್ಲದೆ ಜನಾರ್ಪಣೆ ಕಾರ್ಯಕ್ರಮಕ್ಕೆ ವಿವಿಧ ಸಾಮಾಜಿಕ ಹೋರಾಟಗಾರರು, ಕಾರ್ಮಿಕ ಸಂಘಟನೆಗಳ ನಾಯಕರು, ಬರಹಗಾರರು ಹಾಗೂ ಅಲ್ಪಸಂಖ್ಯಾತರ ಮುಖಂಡರು ಭಾಗವಹಿಸಲಿದ್ದು, ಚರ್ಚೆ ಹಾಗೂ ಸಂವಾದಗಳ ಮೂಲಕ ಸಮಕಾಲೀನ ಸಮಾಜದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ನಡೆಯಲಿದೆ ಎಂದರು. ದೇಶ ಇಂದು ಸಂಕಷ್ಟ, ಸಂಕ್ರಮಣ ಸ್ಥಿತಿಯಲ್ಲಿದೆ. ಮಹಿಳಾ ದೌರ್ಜನ್ಯ, ರೈತರ ಆತ್ಮಹತ್ಯೆ, ನಿರುದ್ಯೋಗ, ಕೊಲೆಯಂತಹ ಕೃತ್ಯಗಳು ನಿತ್ಯವಾಗಿವೆ. ಇವುಗಳಿಗೆ ಪರಿಹಾರ ಕಂಡು ಕೊಳ್ಳುವ ನಿಟ್ಟಿನಲ್ಲಿ ಸಮಾಜಕ್ಕೆ ಈ ಕೃತಿಯ ಅವಶ್ಯಕತೆ ಇದೆ ಎಂದು ರಾಜು ಹೇಳಿದರು.

ದಸಂಸ ರಾಜ್ಯ ಸಂಚಾಲಕ ರಾಜ್ ಶೇಖರ್, ವಿಜಯ್ ಕುಮಾರ್, ಹರೀಶ್ ಕಟ್ಟೆಬೆಳಗುಲಿ, ವಿಜಯ್ ಕುಮಾರ್ ಹಾಜರಿದ್ದರು.

# ಗಿಡಗಳ ಬೆಳವಣಿಗೆಯಲ್ಲಿ ಮನುಷ್ಯನ ಪಾತ್ರ ಎಳ್ಳಷ್ಟು ಇಲ್ಲ

## ನೈಸರ್ಗಿಕ ಕೃಷಿ ಕಾರ್ಯಾಗಾರ ಸಮಾರೋಪ ಸಮಾರಂಭದಲ್ಲಿ ಡಾ. ಸುಭಾಷ್ ಅಭಿಮತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಳೇಬೀಡು: ಸಸ್ಯಗಳ ಬೆಳವಣಿಗೆ ಹಾಗೂ ದೇಹ ರಚನೆಯು ಅದು ತನ್ನಲ್ಲೇ ಉತ್ಪಾದಿಸಿಕೊಳ್ಳುವ ಪೋಷಕಾಂಶಗಳಿಂದ ಆಗುತ್ತದೆ. ಪತ್ರ ಹರಿತ್ತು ಮತ್ತು ದ್ಯುತಿ ಸಂಶ್ಲೇಷಣ ಕ್ರಿಯೆ ಸಸ್ಯಗಳ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ನೈಸರ್ಗಿಕ ಕೃಷಿ ತಜ್ಞ ಡಾ. ಸುಭಾಷ್ ಪಾಳೇಕರ್ ಹೇಳಿದರು.

ಪುಷ್ಪಗಿರಿ ಶ್ರೀಮಠದ ಆವರಣದಲ್ಲಿ ಮೂರು ದಿನಗಳ ಕಾಲ ನಡೆದ ನೈಸರ್ಗಿಕ ಕೃಷಿ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಪ್ರಕೃತಿ ಮಳೆ ಸುರಿಸುತ್ತದೆ, ಗಿಡಗಳು ಬೆಳೆಯುತ್ತವೆ. ಇದರಲ್ಲಿ



ಮನುಷ್ಯನ ಪಾತ್ರ ಅಥವಾ ಶಕ್ತಿ ಪ್ರಯೋಗ ಎಳ್ಳಷ್ಟೂ ಇಲ್ಲ. ಆದ್ದರಿಂದ, ಮಾನವರು ಕೃಷಿ ಪದ್ಧತಿಯನ್ನು ವ್ಯಾಪಾರೀ ಮನೋಭಾವದಿಂದ ಪರಿಗಣಿಸುವುದನ್ನು ಬಿಡಬೇಕು ಎಂದರು.

ಇಲ್ಲಿಗೆ ಬಂದ ದಿನದಿಂದಲೂ ನಾನು ಗಮನಿಸಿದ ಪ್ರಮುಖ ಅಂಶವೆಂದರೆ, ರೈತರು ನೈಸರ್ಗಿಕ ಪದ್ಧತಿಯ ಬಗ್ಗೆ ಹೊಂದಿರುವ ಆಸಕ್ತಿ ಮತ್ತು ಸ್ವಲ್ಪವೂ ವ್ಯರ್ಥ ಮಾತಿಗೆ ಅವಕಾಶಕೊಡದೆ, ಸಮಯವನ್ನು ಹಾಳು ಮಾಡದೆ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದು. ಮನುಷ್ಯನಿಂದ ಸಸ್ಯಲೋಕಕ್ಕೆ ಯಾವ ಪ್ರಯೋಜನವೂ ಇಲ್ಲ. ಸಸ್ಯಗಳು ಮನುಷ್ಯರಿಂದ ಮತ್ತು ಇನ್ನಿತರ ಮೂಲಗಳಿಂದ ಬಿಡುಗಡೆಯಾಗುವ ಇಂಗಾಲವನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತಿದೆ. ಅದರಿಂದ ನಾವು ಉಸಿರಾಡುತ್ತಿದ್ದೇವೆ. ಹಾಗಾಗಿ ನಿಸರ್ಗದತ್ತವಾದ ನಿಯಮಗಳ ಅನುಸಾರ ಬೆಳೆಯುವ ಗಿಡ ಮರಗಳನ್ನು ನಾವು ಕೃತಕವಾಗಿ ಪೋಷಿಸಿ ಅಭಿವೃದ್ಧಿಪಡಿಸಿದರೆ ವಿನಾಶ ಕಟ್ಟಿಟ್ಟ ಬುತ್ತಿ. ಸಾವಯವ ಮಾದರಿ ಎಂಬ ಹೆಸರಿನಲ್ಲಿ ಇತ್ತೀಚೆಗೆ ದೊಡ್ಡ ದಂಧೆಯೇ ಆರಂಭವಾಗಿದೆ. ನೈಸರ್ಗಿಕ ಪದ್ಧತಿಯಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳು ಮನುಷ್ಯನಿಗಷ್ಟೇ ಅಲ್ಲದೆ, ಪ್ರಾಣಿ ಪಕ್ಷಿಗಳ ಇರುವಿಕೆಗೂ ಅನುಕೂಲವಾಗುತ್ತದೆ. ಮೂರು ದಿನಗಳ ಕಾಲ ನಡೆದ ಕಾರ್ಯಾಗಾರವು ನಿಜವಾದ ರೀತಿಯಲ್ಲಿ ಯಶಸ್ವಿಯಾಗುವುದು. ಇಲ್ಲಿ ಬಂದಿರುವ ರೈತರೆಲ್ಲರೂ, ಈ ಪದ್ಧತಿಯನ್ನು ಅಳವಡಿಸಿಕೊಂಡು ವ್ಯವಸಾಯ ಮಾಡಿದರೆ ಮಾತ್ರ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಪುಷ್ಪಗಿರಿ ಮಠದ ಸೋಮಶೇಖರ ಸ್ವಾಮೀಜಿ ಮಾತನಾಡಿ, ನಾವು ಪಾಳೇಕರ್ ಅವರನ್ನು ತರಬೇತಿ ನಡೆಸಿಕೊಡಲು ವಿನಂತಿಸಿದಾಗ ಮರುಮಾತಿಲ್ಲದೆ ಒಪ್ಪಿಕೊಂಡರು. ನಮ್ಮಲ್ಲಿ ಕಾರ್ಯಾಗಾರಕ್ಕೆ ರೈತರು ಸೇರುತ್ತಾರೋ ಇಲ್ಲವೋ ಎಂಬ ಆತಂಕವೂ ಇತ್ತು. ಹಾಗಾಗಿ ತಿಂಗಳು ಕಾಲ ಸಾಕಷ್ಟು ಪ್ರಚಾರವನ್ನು ಮಾಡಿದೆವು. ಆದರೆ, ನಮ್ಮ ನಿರೀಕ್ಷೆ ಮೀರಿ ರಾಜ್ಯವಷ್ಟೇ ಅಲ್ಲದೆ ವಿದೇಶಗಳಿಂದಲೂ ರೈತರು ಬಂದು ಮಾಹಿತಿ ಪಡೆದುಕೊಂಡಿರುವುದು, ಪಾಳೇಕರ್ ಅವರ ಕೃಷಿ ಜ್ಞಾನಕ್ಕೆ ಸಾಕ್ಷಿಯಾಗಿದೆ. ಆಹಾರವನ್ನು ಸೇವಿಸದೆ ಯಾರೂ ಬದುಕಿರಲು ಸಾಧ್ಯವಿಲ್ಲ. ಅಂತಹ ಆಹಾರವು ಜೀವಕ್ಕೆ ಇಂಬುಕೊಡುವ ಬದಲು ವಿಷಯುಕ್ತವಾಗಿ ಪರಿಣಮಿಸುತ್ತಿರುವುದು ದುರ್ದೈವ. ಅಂತಿಮವಾಗಿ ಭವಿಷ್ಯದ ಅನಾಹುತಕ್ಕೆ ರೈತರೇ ಪರೋಕ್ಷವಾಗಿ ಕಾರಣರಾಗುತ್ತಾರೆ. ಬಹುರಾಷ್ಟ್ರೀಯ ಕಂಪನಿಗಳ ಪ್ರಚೋದನೆಗೆ ಮರುಳಾಗದೆ ಮಣ್ಣಿನ ಸತ್ವವನ್ನು ಉಳಿಸಿಕೊಂಡು ಪಾಳೇಕರ್ ಪದ್ಧತಿಯನ್ನು ವ್ಯವಸಾಯ ಮಾಡುವುದನ್ನು ಎಲ್ಲರೈತರೂ ಅಳವಡಿಸಿಕೊಳ್ಳಬೇಕು. ಮೂರು ದಿನಗಳ ಆರೋಗ್ಯಕರ ಕಾರ್ಯಾಗಾರವು ನಮ್ಮ ಮನಸ್ಸಿಗೆ ತುಂಬ ನೆಮ್ಮದಿ ತಂದುಕೊಟ್ಟಿದೆ ಎಂದು ಸಂತಸ ವ್ಯಕ್ತಪಡಿಸಿದರು.

ರೈತ ಮುಖಂಡರಾದ ಕಣಗಾಲ್ ಮೂರ್ತಿ, ಕೆ.ಟಿ.ಗಂಗಾಧರ, ಟಿ.ಬಿ.ಹಾಲಪ್ಪ, ಗುರುಸ್ವಾಮಿಗೌಡ, ಎಲ್.ಈ.ಶಿವಪ್ಪ ಮತ್ತಿತರರು ಮಾತನಾಡಿ ಕಾರ್ಯಾಗಾರದ ಬಗ್ಗೆ ಅನಿಸಿಕೆ ವ್ಯಕ್ತಪಡಿಸಿದರು. ಸಂಜೆ ರೈತರೊಂದಿಗಿನ ಆತ್ಮೀಯ ಸಂವಾದದ ಬಳಿಕ ಅಧಿಕೃತವಾಗಿ ಕಾರ್ಯಾಗಾರವನ್ನು ಮುಕ್ತಾಯಗೊಳಿಸಲಾಯಿತು.

### ರೈತರಿಗೆ ದಿಕ್ಸೂಚಿಯಾದ ಕಾರ್ಯಾಗಾರ

ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳು ಉತ್ಪತ್ತಿಯಾದರೆ ಮಾತ್ರ ಬೆಳೆಯು ಸ್ವಾಭಾವಿಕವಾಗಿ ಉತ್ತಮ ಫಲವನ್ನು ಕೊಡಲು ಸಾಧ್ಯ ಮತ್ತು ಒಂದೇ ಬೆಳೆಯ ಪದ್ಧತಿಗೆ ಸೀಮಿತವಾಗದೆ ಬಹು ಬೆಳೆ ವಿಧಾನವನ್ನು ಅನುಸರಿಸಬೇಕು. ಇದರಲ್ಲಿ ನೈಸರ್ಗಿಕ ಪದ್ಧತಿಯ ಅನುಷ್ಠಾನವಾಗಬೇಕು ಎಂಬದನ್ನು ಮೂರು ದಿನಗಳ ಕಾರ್ಯಾಗಾರದಲ್ಲಿ ರೈತರು ಅರಿತುಕೊಂಡರು. ಅಂದಾಜು 2000 ರೈತರು ಭಾಗವಹಿಸಿದ್ದ ಕಾರ್ಯಕ್ರಮಕ್ಕೆ ರಾಜ್ಯ ಹಾಗೂ ದೇಶದ ವಿವಿಧ ಭಾಗಗಳಿಂದಲ್ಲದೆ ನೇಪಾಳ, ಕೇರಳ, ತಮಿಳುನಾಡು, ಪಂಜಾಬ್, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದಿಂದಲೂ ಆಗಮಿಸಿ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು. ವಿಧೇಯ ವಿದ್ಯಾರ್ಥಿಗಳಂತೆ ಸಾವಧಾನದಿಂದ ಕುಳಿತು ಪಾಳೇಕರ್ ಅವರ ಮಾತುಗಳನ್ನು ಆಲಿಸಿದ್ದಲ್ಲದೆ, ಪುಸ್ತಕದಲ್ಲಿ ಪ್ರತಿಯೊಂದನ್ನೂ ಬರೆದು ದಾಖಲಿಸಿಕೊಂಡರು. ಕಾರ್ಯಾಗಾರಕ್ಕೆ ಬಂದಿದ್ದ ಎಲ್ಲರಿಗೂ ಮಠದ ವತಿಯಿಂದ ಊಟ,ತಿಂಡಿಯ ಜತೆಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಕಾರ್ಯಾಗಾರದ ನಿಮಿತ್ತ ಹಾಕಿದ್ದ ದೇಸಿ ಕೃಷಿ ಉತ್ತಪನ್ನ ಮಾರಾಟ ಮಳಿಗೆಯಲ್ಲಿ ಮಂಡ್ಯ ಜಿಲ್ಲೆಯ ನಿರ್ಮಲಾ ಭೂಮಾತಾ ಟ್ರಸ್ಟ್‌ನ ಉತ್ಪನ್ನವಾದ ನೈಸರ್ಗಿಕ ಬೆಲ್ಲವು ಅತೀ ಹೆಚ್ಚು ಮಾರಾಟವಾಯಿತು. ಅತ್ಯಂತ ಶಿಸ್ತಿನಿಂದ ನಡೆದ ಕಾರ್ಯಕ್ರಮವು ಪುಷ್ಪಗಿರಿ ಶ್ರೀಗಳ ಆಸಕ್ತಿ, ಪರಿಶ್ರಮಕ್ಕೆ ಕನ್ನಡಿ ಹಿಡಿದಮತೆ ಇತ್ತು ಮತ್ತು ಈ ಭಾಗದ ರೈತರಿಗೆ ಹೊಸ ದಿಕ್ಸೂಚಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

# ವಾಣಿ ವಿಲಾಸ ಸರ್ಕಾರಿ ಶಾಲೆಯಲ್ಲಿ ಕಲಿಕಾ ಹಬ್ಬ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಶಾಲೆಯಿಂದ ಯಾವ ಮಕ್ಕಳು ಹೊರಗುಳಿಯಬಾರದೆಂಬ ಕಾರಣಕ್ಕೆ ಶಿಕ್ಷಣ ಇಲಾಖೆ ಎಸ್‌ಡಿಎಂಸಿ ಪದಾಧಿಕಾರಿಗಳಿಗೆ ಗುರುತರ ಜವಾಬ್ದಾರಿ ನೀಡಿದೆ. ಶಿಕ್ಷಕರೊಂದಿಗೆ ಅವರೂ ಸಹ ಮಗುವನ್ನು ಶಾಲೆಗೆ ಕರೆತರಲು ಸಹಕರಿಸಬೇಕೆಂದು ಶಿಕ್ಷಣಾಧಿಕಾರಿ ಚಂದ್ರಶೇಖರ್ ಹೇಳಿದರು.

ನಗರದ ವಾಣಿ ವಿಲಾಸ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಏರ್ಪಡಿಸಿದ್ದ ಎಫ್‌ಎಲ್‌ಎನ್ ಕಲಿಕಾ ಹಬ್ಬ ಉದ್ಘಾಟಿಸಿ ಮಾತನಾಡಿ, ನ. 14ರಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ನಡೆಸಿದ ಸಭೆಯಲ್ಲಿ ಎಸ್‌ಡಿಎಂಸಿ ಪದಾಧಿಕಾರಿಗಳಿಗೂ ಜವಾಬ್ದಾರಿ ವಹಿಸಿದ್ದಾರೆ. ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳ ಸಭೆಯನ್ನು ಕಡ್ಡಾಯವಾಗಿ ನಡೆಸುವಂತೆ ಸೂಚಿಸಿದ್ದಾರೆಂದರು.

ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಕನಿಷ್ಟ ಪದ ಗುರುತಿಸುವ, ವಾಕ್ಯ ರಚನೆಯ ಸಾಮರ್ಥ್ಯ ಕಲಿಸುವ ಉದ್ದೇಶದಿಂದ 2024-25ನೇ ಸಾಲಿನಿಂದ ಕಲಿಕಾ ಹಬ್ಬವನ್ನು ಜಾರಿಗೆ ತರಲಾಯಿತು. ಅದಕ್ಕಿಂತ ಮೊದಲು ನಲಿ-ಕಲಿ ಯೋಜನೆ ಜಾರಿಯಲ್ಲಿತ್ತು. ಒಟ್ಟು 16 ಅಂಶಗಳನ್ನು ಹಾಕಿಕೊಂಡಿದ್ದು ಅಕ್ಷರ ಜ್ಞಾನ ಮೂಡಿಸುವುದು ಪ್ರಮುಖ ಉದ್ದೇಶವಾಗಿದೆ. ಕಲಿಕಾ ಹಬ್ಬದಲ್ಲಿ ಭಾಗಿಯಾದ ವಿದ್ಯಾರ್ಥಿ ಪ್ರೌಢಶಾಲಾ ಹಂತದಲ್ಲಿ ಸಾಕಷ್ಟು ಸುಧಾರಣೆಯಾಗಿರುವ ನಿದರ್ಶನಗಳಿವೆ ಎಂದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಳೆದ ಬಾರಿ ಹಾಸನ ಜಿಲ್ಲೆ 3ನೇ ಸ್ಥಾನ ಪಡೆದಿದ್ದು ಈ ಬಾರಿ ಮೊದಲ ಸ್ಥಾನದಲ್ಲಿರುತ್ತದೆಂಬ ವಿಶ್ವಾಸವಿದೆ. ಆ ನಿಟ್ಟಿನಲ್ಲಿ ಈಗಿನಿಂದಲೇ ಪ್ರಯತ್ನಗಳು ನಡೆಯುತ್ತಿವೆ. ಪೋಷಕರು ಸರ್ಕಾರಿ ಶಾಲೆಗಳ ಬಗ್ಗೆ ಅಸಡ್ಡೆ ಮನೋಭಾವ ಹೊಂದಬಾರದು. ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 48 ಖಾಸಗಿ ಶಾಲೆಗಳು ಶೇ. 100 ಫಲಿತಾಂಶ ನೀಡಿದರೆ 52 ಸರ್ಕಾರಿ ಶಾಲೆಗಳು ಆ ಸಾಧನೆ ಮಾಡಿವೆ. ಪೋಷಕರು ಮಕ್ಕಳ ವ್ಯಾಸಂಗದ ದೃಷ್ಟಿಯಿಂದ ಎಲ್ಲಾ ನೆರವು ನೀಡಬೇಕೆಂದು ಸಲಹೆ ನೀಡಿದರು.

ಕ್ಲಸ್ಟರ್ 2 ಸಿಆರ್‌ಪಿ ಚಂದ್ರಕಾಂತ್ ಮಾತನಾಡಿ, ಶೈಕ್ಷಣಿಕ ಚಟುವಟಿಕೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ತಯಾರು ಮಾಡುವುದೇ ಎಫ್‌ಎಲ್‌ಎನ್ ಕಲಿಕಾ ಹಬ್ಬ. ಕಳೆದ ಜೂನ್ ತಿಂಗಳಿಂದ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮಕ್ಕಳ ಶೈಕ್ಷಣಿಕ ಪ್ರಗತಿ ಮೌಲ್ಯಮಾಪನಕ್ಕೆ ಈ ಕಾರ್ಯಕ್ರಮಕ್ಕೆ ನೆರವಾಗಲಿದೆಯೆಂದರು.

ವಿದ್ಯಾರ್ಥಿಗಳು ಆಕರ್ಷಕ ಮೆರವಣಿಗೆ ಮೂಲಕ ಕಲಿಕಾ ಹಬ್ಬದ ಜಾಗೃತಿ ಮೂಡಿಸಿದರು. ಎಸ್‌ಡಿಎಂಸಿ ಅಧ್ಯಕ್ಷೆ ಕುಮಾರಿ, ಉಪಾಧ್ಯಕ್ಷ ಹರೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ರಂಗನಾಥ್, ದೊಡ್ಡಳ್ಳಿ ರಮೇಶ್, ಮುಖ್ಯ ಶಿಕ್ಷಕಿ ಮೀನಾಕ್ಷಿ, ಶಿಕ್ಷಣ ಸಂಯೋಜಕರಾದ ಶಿಕ್ಷಕರಾದ ಪವಿತ್ರಾ, ಕೃಷ್ಣ, ನಿವೃತ್ತ ಶಿಕ್ಷಕಿ ಸರೋಜಮ್ಮ ಮತ್ತಿತರರಿದ್ದರು.

# ವಾಹನ ಸವಾರರು ರಸ್ತೆ ಸುರಕ್ಷತಾ ನಿಯಮ ಪಾಲಿಸಲು ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಸೀಕೆರೆ: ಹೆಲ್ಮೆಟ್ ಮತ್ತು ಸೀಟ್ ಬೆಲ್ಟ್ ಧರಿಸಿ ವಾಹನ ಚಾಲನೆ ಮಾಡಿದರೆ ಅಪಘಾತ ಸಂಭವಿಸಿದರೂ ಪ್ರಾಣಾಪಾಯದಿಂದ ಪಾರಾಗುವ ಸಾಧ್ಯತೆಗಳಿರುತ್ತವೆ. ಜೀವ ರಕ್ಷಣೆಗೆ ಹೆಲ್ಮೆಟ್ ಮತ್ತು ಸೀಟ್ ಬೆಲ್ಟ್ ಧರಿಸುವುದನ್ನು ಮರೆಯಬೇಡಿ ಎಂದು ಹಾಸನ ಪ್ರಾದೇಶಿಕ ಸಾರಿಗೆ ಇಲಾಖೆ ಮುಖ್ಯಸ್ಥ ಜೆ.ಪಿ. ಪ್ರಕಾಶ್ ತಿಳಿಸಿದರು

ತಾಲ್ಲೂಕಿನ ಗಂಡಸಿ ಸೈಂಟ್ ಜಾನ್ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆ ಹಾಸನ, ಅಕ್ಷಯ ಡ್ರೈವಿಂಗ್ ಸ್ಕೂಲ್ ಆಶ್ರಯದಲ್ಲಿ ಮಂಗಳವಾರ ನಡೆದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಉದ್ಘಾಟಿಸಿ ಮಾತನಾಡಿ, ಯಾವುದೇ ಒಬ್ಬ ವ್ಯಕ್ತಿಗೆ ಅಪಘಾತವಾಗಿ ಜೀವನ್ಮರಣ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಿಸುವ ಬದಲು ಆಸ್ಪತ್ರೆಗೆ ಸೇರಿಸಲು ಸಹಕರಿಸಿ ಕೇಂದ್ರ ಸರ್ಕಾರ ರಸ್ತೆ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಗಳಿಗೆ ತಕ್ಷಣ ಸಹಾಯ ಮಾಡಲು ರಹಾವೀರ ಯೋಜನೆಯನ್ನು ಜಾರಿಗೆ ತಂದಿದ್ದು ಅಪಘಾತವಾದ ಒಂದು ಗಂಟೆ ಒಳಗೆ ಗೋಲ್ಡನ್ ಅವರ್‌ನಲ್ಲಿ ಅಪಘಾತ ಸ್ಥಳದಲ್ಲಿ ಇತರೆ ವ್ಯಕ್ತಿಗಳು ಮಾನವೀಯತೆ ದೃಷ್ಟಿಯಿಂದ ಗಾಯಾಳನ್ನು ಆಸ್ಪತ್ರೆಗೆ ಸಾಗಿಸಲು ಸಹಕರಿಸಿ ಅಥವಾ ಉತ್ತೇಜಿಸಿ ಈ ರೀತಿ ಮಾಡುವುದರಿಂದ ಒಂದು ಜೀವಕ್ಕೆ ನೀವೇ ಜೀವದಾನ ಮಾಡಿದಂತಾಗುತ್ತದೆ ಗಾಯಾಳುವಿನ ಆಸ್ಪತ್ರೆಯ ಚಿಕಿತ್ಸಾ ವೆಚ್ಚ 7 ಲಕ್ಷದವರೆಗೆ ಸರ್ಕಾರವೇ ಬರಿಸಲಿದೆ ರಾಹವೀರ ಯೋಜನೆಯಡಿ ಗಾಯಾಳುಗೆ ಸಹಕರಿಸಿದ ವ್ಯಕ್ತಿಗೆ ಕಾನೂನಿನ ರಕ್ಷಣೆ ಇದ್ದು ಪೋಲೀಸ್ ಮತ್ತು ನ್ಯಾಯಾಲಯದ ಕಿರುಕುಳ ಇರುವುದಿಲ್ಲ ಸ್ವಯಿಚ್ಛೆಯಿಂದ ಹೇಳಿಕೆ ನೀಡಬಹುದು ಎಂದರು,

ರಸ್ತೆ ಸುರಕ್ಷತೆ ಎಂದರೆ ಕೇವಲ ನಿಯಮಗಳು ಎಂದು ತಿಳಿಯಬೇಡಿ. ಮನುಷ್ಯರ ಜೀವ ರಕ್ಷಣೆಯ ಮೂಲತತ್ವವಾಗಿದ್ದು ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಾಲನೆ ಮಾಡುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ಜೀವ ಹಾನಿಯಾದರೆ ದಂಡ ಮತ್ತು ಇತರೆ ಎಲ್ಲಾ ವೆಚ್ಚವನ್ನು ಅಪ್ರಾಪ್ತ ಬಾಲಕನ ಕುಟುಂಬದವರೇ ಭರಿಸಬೇಕಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಾರಿಗೆ ಇನ್ಸ್‌ಪೆಕ್ಟರ್ ಪದ್ಮನಾಭ, ಅಕ್ಷಯ ಡ್ರೈವಿಂಗ್ ಸ್ಕೂಲ್ ಮಾಲೀಕ ಸಿದ್ದಲಿಂಗ ಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ್ ಕುಮಾರ್, ಸೈಂಟ್ ಜಾನ್ ಶಾಲೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಮುಕೇಶ್ ಗಂಡಸಿ ಪೊಲೀಸ್ ಠಾಣೆ ಎ ಎಸ್ ಐ ಮಂಜೇಗೌಡ, ವಕೀಲ ಕೃಷ್ಣಕುಮಾರ್ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಕೋಪ ಮನುಷ್ಯನ ಮೊದಲ ಶತ್ರು: ಕೋಡಿಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ಮನುಷ್ಯನು ಕೋಪದ ಕೈಗೆ ಬುದ್ದಿ ಕೊಟ್ಟರೆ ಮಾನವೀಯತೆಯ ಮೌಲ್ಯ ಕಳೆದುಕೊಳ್ಳುತ್ತಾನೆ ಎಂದು ಹಾರನಹಳ್ಳಿ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕತ್ತರಿಘಟ್ಟದ ಶ್ರೀ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದಲ್ಲಿ ಲೋಕ ಕಲ್ಯಾಣಾರ್ಥ ಹಮ್ಮಿಕೊಂಡಿದ್ದ 22ನೇ ಮಹಾ ಚಂಡಿಕಾ ಯಾಗ ಕಾರ್ಯಕ್ರಮ ನೆರವೇರಿಸಿ ಮಾತನಾಡಿ, ಕೋಪ ಎಂಬುದೇ ಮನುಷ್ಯನ ಮೊದಲ ಶತ್ರು ಎಂದರು. ಕೋಪಿಷ್ಟ ವ್ಯಕ್ತಿಗೆ ಎಂದಿಗೂ ಸುಖವಿಲ್ಲ. ಸಂಸಾರ ಸುಖಕರವಾಗಿರುವುದಿಲ್ಲ. ಸ್ನೇಹ ಹಾಗೂ ಬಾಂಧವ್ಯದ ಬಂಧನ ಅಳಿಸಿ ಹೋಗಲಿದೆ. ಕೋಪ ಎಂಬುದು ಅಜ್ಞಾನದ ಕೋಪ. ಕೋಪವನ್ನು ಗೆಲ್ಲಬೇಕು. ಇಲ್ಲವಾದಲ್ಲಿ ಬದುಕಿಗೆ ಮುಕ್ತಿ ದೊರೆಯುವುದಿಲ್ಲ ಎಂದರು.

ಕೋಪ, ಅತಿ ಆಸೆ ಹಾಗೂ ದುಶ್ಚಟಗಳು ಮನುಕುಲದ ಅಂತ್ಯಕ್ಕೆ ಕಾರಣವಾಗುತ್ತಿವೆ. ಮಾನವೀಯ ಮೌಲ್ಯಗಳು ಮನುಷ್ಯನ ತಿದ್ದುವಂತಹ ದಾರಿ ದೀಪಗಳು. ಮಾನವೀಯತೆ ಮರೆತರೆ ಮೃಗಗಳಿಗೂ ಮನುಷ್ಯನಿಗೂ ಏನೂ ಸಹ ವ್ಯತ್ಯಾಸ ಇರುವುದಿಲ್ಲ ಎಂದು ತಿಳಿಸಿದರು.

ದಣಿದು ಬಂದ ದೇಹಗಳಿಗೆ ವಿಶ್ರಾಂತಿ, ಹಸಿದು ಬಂದವರಿಗೆ ಪ್ರಸಾದ ಹಾಗೂ ಜ್ಞಾನ ಹರಿಸಿ ಬಂದವರಿಗೆ ವಿದ್ಯೆ ನೀಡುವುದೇ ಮಠ-ಮಾನ್ಯಗಳ ಪರಂಪರೆ ಹಾಗೂ ಸಂಸ್ಕೃತಿಯಾಗಿ ಬೆಳೆದು ಬಂದಿದೆ ಎಂದರು. ದೇವರನ್ನು ಪೂಜಿಸಿದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಗುರು ಹಿರಿಯರಿಗೆ ಗೌರವ ನೀಡಿದರೆ ಮಾನವೀಯತೆ ಮೌಲ್ಯ ಬೆಳೆಯುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿದರೆ ಬದುಕಿಗೆ ಮುಕ್ತಿ ದೊರೆಯಲಿದೆ ಎಂದು ಸಲಹೆ ನೀಡಿದರು.

ಹೆಣ್ಣನ್ನು ತಾಯಿಯಾಗಿ ನೋಡುವುದು ನಮ್ಮ ಸಂಸ್ಕೃತಿ. ಭಾರತೀಯ ಸಂಸ್ಕೃತಿಯಲ್ಲಿ ಶೀಲಕ್ಕೆ ಗೌರವವಿದೆ. ಸೀರೆಯು ರಕ್ಷಣಾ ಕವಚವಾಗಿದೆ. ಹೆಣ್ಣು ಮಕ್ಕಳು ಸೀರೆಯನ್ನುಟ್ಟರೆ ನಮ್ಮ ಸಂಸ್ಕೃತಿಗೆ ಹೆಚ್ಚು ಗೌರವ ಸಿಗುತ್ತದೆ ಎಂದು ಮಹಿಳೆಯರಿಗೆ ಕಿವಿಮಾತು ಹೇಳಿದರು.

ಶ್ರೀ ಚಂದ್ರಶೇಖರ ಗುರೂಜಿ ಮಾತನಾಡಿ, ಮನುಷ್ಯನು ದುರಾಸೆಯಿಂದ ಪ್ರಕೃತಿಯ ಮೇಲೆ ದಾಳಿ ಮಾಡುತ್ತಿದ್ದಾನೆ. ಪ್ರಾಣಿ, ಪಕ್ಷಿಗಳು ಹಾಗೂ ಮರಗಳಿಗೆ ಇರುವ ಜ್ಞಾನ ಮನುಕುಲಕ್ಕೆ ಇಲ್ಲ ಎಂದು ಅಸಮಾಧಾನ ಹೊರಹಾಕಿದರು. ಭೂಮಿಯ ಮೇಲೆ, ನೀರು ಹಾಗೂ ಗಾಳಿಯಲ್ಲಿ ಸೇರಿದಂತೆ 84 ಲಕ್ಷ ಜೀವಿಗಳಲ್ಲಿ ಮನುಷ್ಯ ಜನ್ಮವೇ ಶ್ರೇಷ್ಠ ಹಾಗೂ ಕೊನೆಯ ಜನ್ಮವಾಗಿರುತ್ತದೆ. ಆದರೆ ಮನುಷ್ಯನು ಮಾನವೀಯತೆ ಮರೆತು ನಾನು, ನನ್ನದು, ಎಲ್ಲವೂ ನನಗೆ ಬೇಕು ಎಂಬ ದುರಾಸೆಗೆ ಸಿಲುಕಿ ನಗುತ್ತಿದ್ದಾನೆ. ಅದರಿಂದ ಹೊರ ಬರದೆ ಬದುಕಿನಲ್ಲಿ ಸಾರ್ಥಕತೆ ಪಡೆಯಲು ಸಾಧ್ಯವಿಲ್ಲ ಎಂದರು.

ಮಹಾ ಚಂಡಿಕಾ ಯಾಗದ ಪ್ರಯುಕ್ತ ಶ್ರೀ ಮೆಳಿಯಮ್ಮ ದೇವಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಮಹಾಗಣಪತಿ ಹೋಮ, ಪುಣ್ಯಹಾವಾಚನ, ಅಂಕುರಾರ್ಪಣೆ, ದುರ್ಗಾಮಂಡಲ ಆರಾಧನೆ, ದುರ್ಗಾಸಪ್ತಶತಿ ಪಾರಾಯಣ, ಪೂರ್ಣಾವತಿಯೊಂದಿಗೆ ಮಹಾಮಂಗಳಾರತಿ ಬೆಳಗಿಸಲಾಯಿತು. ಮಹಿಳೆಯರಿಗೆ ಬಾಗಿನ ಅರ್ಪಿಸಲಾಯಿತು. ಕಲಾ ಪರಿವಾರದಿಂದ ಭಜನಾ ಕಾರ್ಯಕ್ರಮ ನಡೆಯಿತು.

ಆಧ್ಯಾತ್ಮಿಕ ಕೇಂದ್ರದ ಕಾರ್ಯದರ್ಶಿ ಅಮೋಘ, ಸಮರ ಸೇನೆ ರಾಜ್ಯಾಧ್ಯಕ್ಷ ಭರತ್ ಗೌಡ, ಪ್ರಮುಖರಾದ ಉಮಾ ಮಹೇಶ್, ಚೆನ್ನಪ್ಪ, ಮಹದೇವ್, ನಂಜಪ್ಪ ಹಾಗೂ ಇತರರು ಇದ್ದರು.

# ಎಟಿಆರ್ ಅಭಿನಂದನಾ ಗ್ರಂಥಕ್ಕೆ ಲೇಖನ ಆಹ್ವಾನ

ಅರಕಲಗೂಡು: ಮಾಜಿ ಶಾಸಕ, ಪರಿಸರಕ್ಕಾಗಿ ನಾವು ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಎ.ಟಿ.ರಾಮಸ್ವಾಮಿ ಅವರ ಅಭಿನಂದನಾ ಗ್ರಂಥ ಹೊರತರಲು ಮೈಸೂರಿನ ಎ.ಟಿ.ರಾಮಸ್ವಾಮಿ ಅಭಿನಂದನಾ ಗ್ರಂಥ ಸಮಿತಿ ನಿರ್ಧರಿಸಿದ್ದು, ಆ ಬಗ್ಗೆ ಚರ್ಚಿಸಲು ಜ. 10ರ ಶನಿವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕಿನ ಮುದ್ದನಹಳ್ಳಿಯ ಅರಸೀಕಟ್ಟೆ ಅಮ್ಮ ದೇವಾಲಯ ಆವರಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಸಂಘದ ರಾಜ್ಯಾಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ (ಪರೀಕ್ಷಾಂಗ) ಡಾ.ಎ. ರಂಗಸ್ವಾಮಿ, ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕ ಬಿ.ಕೆ.ಬಸವರಾಜು, ವಕೀಲ ಜನಾರ್ದನ ಗುಪ್ತ, ಡಾ.ಬಿ.ಈ.ಯೋಗೇಂದ್ರ ಸೇರಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಕೋರಿದೆ. ಜೊತೆಗೆ ಎ.ಟಿ.ರಾಮಸ್ವಾಮಿ ಅವರ ಕುರಿತು ಬರಹಗಳನ್ನು dr.arangaswamy@gmail.com ಇಲ್ಲಿಗೆ ಕಳುಹಿಸಲು ಕೋರಿದೆ.

# ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಮಕ್ಕಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸುವ ಮೂಲಕ ಕಲಿಕಾ ಹಬ್ಬವು ಅವರ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್ ಹೇಳಿದರು. ತಾಲೂಕಿನ ಹೆಬ್ಬಾಳು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಅವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಹೆಬ್ಬಾಳು ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಉದ್ಘಾಟಿಸಿ ಮಾತನಾಡಿ, ಸ್ಥಳೀಯ ಹಾಗೂ ಗ್ರಾಮೀಣ ಭಾಗದ ಕಲೆಗಳು, ಜನಪದ ಹಾಡುಗಳು ಮತ್ತು ಕಥೆ, ಕವನಗಳಿಗೆ ಈ ಹಬ್ಬದಲ್ಲಿ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪರಿಚಯ, ಚಿತ್ರಕಲೆ, ಮಣ್ಣಿನಲ್ಲಿ ವಿವಿಧ ಮಾದರಿಯ ತಯಾರಿಕೆ, ಕಾಗದದ ಕೆಲಸ, ನಾಟಕಗಳ ಮೂಲಕ ಮಕ್ಕಳ ಸೃಜನಶೀಲ ಶಕ್ತಿಯನ್ನು ಉತ್ತೇಜಿಸಲಾಗುತ್ತದೆ. ಕಲಿಕಾ ಹಬ್ಬವು ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಿಸಲು ಮತ್ತು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರ ಹಾಕಲು ಪೂರಕವಾಗಿದೆ. ಕಲಿಕಾ ಹಬ್ಬದಲ್ಲಿನ ಚಟುವಟಿಕೆಗಳು ಸರ್ಕಾರಿ ಶಾಲಾ ಮಕ್ಕಳಿಗೆ ಮಾತ್ರ ನಡೆಯುತ್ತವೆ. ಸರ್ಕಾರಿ ಶಾಲೆಯ ಕಿರಿಯ ಪ್ರಾಥಮಿಕ ಹಂತದ ಮಕ್ಕಳ ಕಲಿಕೆಯ ಬಗ್ಗೆ ಸಮುದಾಯದ ಗಮನ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಪ್ರತಿಭಾ ಕಾರಂಜಿಯಲ್ಲಿ ಸಾಂಸ್ಕೃತಿಕ ಆಯಾಮದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ ಮಕ್ಕಳಿಗೆ, ಕಲಿಕೆಯ ಸಾಫಲ್ಯತೆ ಪ್ರದರ್ಶಿಸುವ ಸದಾವಕಾಶ ಈ ಕಲಿಕಾ ಹಬ್ಬ ಎಂದರು.

ಹೆಬ್ಬಾಳು ಕ್ಲಸ್ಟರ್ ಮಟ್ಟದ ಸಿಆರ್‌ಪಿ ಚಂದ್ರಕಲಾ ಮಾತನಾಡಿ, ಕಲಿಕಾ ಹಬ್ಬ ಮಾಡಲು ಸರ್ಕಾರ ಹಾಗೂ ಶಿಕ್ಷಣ ಇಲಾಖೆ ತೀರ್ಮಾನ ಮಾಡಿದ್ದರಿಂದ ಮಕ್ಕಳು ಗಟ್ಟಿಯಾಗಿ ಓದುವುದು, ಕಥೆಗಳನ್ನು ಓದಿಸುವುದು, ಸ್ವಾತಂತ್ರ್ಯವಾಗಿ ಬರೆಯುವುದು, ಸಂತೋ?ದಿಂದ ಗಣಿತ ಕಲಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಎಲ್ಲರೀತಿಯಲ್ಲೂಮೂಲಸೌಕರ್ಯಒದಗಿಸಲಾಗುತ್ತಿದೆ. ಪೋ?ಕರು ಹಾಗೂ ಶಿಕ್ಷಕರು ಉತ್ತಮ ಬಾಂಧವ್ಯ ಹೊಂದಿದರೆ ಶಾಲೆಯ ಅಭಿವೃದ್ಧಿ, ಮಕ್ಕಳ ಜ್ಞಾನ ವೃದ್ಧಿಯಾಗುತ್ತದೆ. ಸರ್ಕಾರಿ ಶಾಲೆಗಳನ್ನು ಸಂರಕ್ಷಣೆ ಮಾಡುವುದರಿಂದ ಮಕ್ಕಳು ವಿದ್ಯೆಗಾಗಿ ವಲಸೆ ಹೋಗುವುದನ್ನುತಪ್ಪಿಸಬೇಕು ಎಂದರು.

ಹೆಬ್ಬಾಳು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಧೃವಕುಮಾರಿ, ಪಿಡಿಒ ಅವಿನಾಶ್, ಶಾಲೆಗೆ ಭೂಮಿ ನೀಡಿದ ರಾಮೇಗೌಡ, ನಿವೃತ್ತ ಶಿಕ್ಷಕ ರಾಜಶೇಖರ, ಮತ್ತು ರಮೇಶಪ್ಪ, ಶಿಕ್ಷಕರಾದ ಶಾಂತಮ್ಮ, ಶಾಂತೇಗೌಡ, ವಿಶ್ವೇಶ್ವರ್, ಜಯಣ್ಣ, ಜಗದೀಶ್, ಮಾರುತಿ, ಲೋಲಾಕ್ಷಮ್ಮ, ರುದ್ರೇಗೌಡ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಜನವರಿ-07

1610: ಗ್ಯಾಲಿಲಿಯೋ ಗೆಲಿಲಿ ಅವರು ಗುರು ಗ್ರಹದ ನಾಲ್ಕು ಉಪಗ್ರಹಗಳನ್ನು ಕಂಡುಹಿಡಿದರು.

1927: ನ್ಯೂಯಾರ್ಕ್ ಲಂಡನ್ ನಡುವಿನ ಮೊದಲ ಅಟ್ಲಾಂಟಿಕ್ ದೂರವಾಣಿ ಸಂಪರ್ಕ ಯಶಸ್ವಿಯಾಯಿತು.

1953: ಅಮೇರಿಕಾ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ ಅವರು ಹೈಡ್ರೋಜನ್ ಬಾಂಬ್ ಅಭಿವೃದ್ಧಿ ಘೋಷಣೆ ಮಾಡಿದರು.

### ಜನನ

1800: ಮಿಲ್ಲಾರ್ಡ್ ಫಿಲ್ಮೋರ್ ಅಮೇರಿಕದ 13ನೇ ಅಧ್ಯಕ್ಷ

1919: ಸುನಿಲ್ ದತ್ ಪ್ರಸಿದ್ಧ ಭಾರತೀಯ ನಟ, ನಿರ್ದೇಶಕ ಹಾಗೂ ರಾಜಕಾರಣಿ.

1964: ನಿಕೊಲಸ್ ಕೇಜ್ ಹಾಲಿವುಡ್ ನಟ

### ನಿಧನ

1943: ನಿಕೊಲಾ ಟೆಸ್ಲಾ ಮಹಾನ್ ವಿಜ್ಞಾನಿ ಹಾಗೂ ಆವಿಷ್ಕಾರಕ.

2015: ಬಾಬ್ ಐಸ್‌ಲರ್ ಅಮೇರಿಕನ್ ರಾಜಕಾರಣಿ

# ಆಲೂರು ಪಟ್ಟಣದಲ್ಲಿ ಫ್ಲೆಕ್ಸ್ ಹಾವಳಿ ನಿಯಂತ್ರಣಕ್ಕೆ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಆಲೂರು: ಪಟ್ಟಣದ ಸೌಂದರ್ಯಕ್ಕೆ ಧಕ್ಕೆ ತರುತ್ತಿರುವ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆಗೆಯುವ ಜೊತೆಗೆ ಮುಂದಿನ ದಿನಗಳಲ್ಲಿ ಅಳವಡಿಸದಂತೆ ಕಠಿಣ ಕಾನೂನು ರೂಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪಟ್ಟಣ ಪಂಚಾಯಿತಿಯಲ್ಲಿ ಆಡಳಿತಾಧಿಕಾರಿ ಮಲ್ಲಿಕಾರ್ಜುನ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಸಂಘ ಸಂಸ್ಥೆಗಳ ಮುಖಂಡರು, ಪ.ಪಂ. ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪಟ್ಟಣದ ಬಸ್ ನಿಲ್ದಾಣ, ಮಿನಿ ವಿಧಾನಸೌಧ, ತಾಲ್ಲೂಕು ಪಂಚಾಯಿತಿ ಸೇರಿ ಹಲವು ಕಚೇರಿಗಳ ಮುಂದೆ, ರಸ್ತೆ ತಿರುವಿನಲ್ಲಿ ಜನಸಾಮಾನ್ಯರು, ಸಂಘ ಸಂಸ್ಥೆಗಳಿಂದ ಪ್ರಚಾರಕ್ಕಾಗಿ ಫ್ಲೆಕ್ಸ್ ಅಳವಡಿಸಲಾಗಿದೆ. ಆದರೆ ಅವುಗಳನ್ನು ತೆರವು ಮಾಡದೆ ಬಿಟ್ಟಿರುವುದರಿಂದ ಪಟ್ಟಣದ ಸೌಂದರ್ಯಕ್ಕೆ ಧಕ್ಕೆಯಾಗಿದೆಯಲ್ಲದೆ ಸಂಚಾರಕ್ಕೆ ತೊಡಕಾಗಿದೆ. ಫ್ಲೆಕ್ಸ್ ಅಳವಡಿಸಿ ತೆಗೆಯಲು ಕಾಲ ನಿಗದಿ ಮಾಡಿ ತೆರವುಗೊಳಿಸಬೇಕು. ದ್ವಿಮುಖ ರಸ್ತೆ ಮಧ್ಯದಲ್ಲೂ ಅದೇ ಪರಿಸ್ಥಿತಿ ನಿರ್ಮಾಣವಾಗಿದೆ. ಅವಶ್ಯವಿರುವೆಡೆ ರಸ್ತೆಗಳನ್ನು ನಿರ್ಮಾಣ ಮಾಡಿ, ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಬೇಕು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹಳೆ ಬ್ಯಾಂಕ್ ವೃತ್ತ, ಮಸೀದಿ ಬಳಿ ಅವಶ್ಯವಿರುವೆಡೆಯಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಕಾನೂನು ಕ್ರಮ ಕೈಗೊಳ್ಳಬೇಕು. ಸ್ಮಶಾನ ಅಭಿವೃದ್ಧಿಗೆ ಮುಂದಾಗಬೇಕು. ಕಚೇರಿಯಲ್ಲಿ ಕೊರತೆ ಇರುವ ಸಿಬ್ಬಂದಿ ನೇಮಕ ಮಾಡಬೇಕು. ಅಗತ್ಯವಿರುವಲ್ಲಿ ಅಂಗನವಾಡಿ ಕೇಂದ್ರ ತೆರೆಯಬೇಕು.

ಪಟ್ಟಣದಲ್ಲಿ ಭಾಕಿ ಇರುವ ಖಾತೆಗಳನ್ನು ಇ-ಖಾತೆ ಮಾಡಬೇಕು ಎಂದು ಸಭೆಯಲ್ಲಿ ಹಾಜರಿದ್ದವರು ಸಲಹೆ ನೀಡಿದರು.

ಮುಖ್ಯಾಧಿಕಾರಿ ಮಂಜುನಾಥ್ ರವರು ಮಾತನಾಡಿ, ತಾವು ನೀಡಿರುವ ಸಲಹೆಗಳನ್ನು ಸ್ವೀಕರಿಸಿ ಮುಂದಿನ ಬಜೆಟ್‌ನಲ್ಲಿ ಅಳವಡಿಸಿಕೊಂಡು ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಪ.ಪಂ. ಮಾಜಿ ಅಧ್ಯಕ್ಷೆ ತಾಹೆರಾ ಬೇಗಂ. ಮಾಜಿ ಉಪಾಧ್ಯಕ್ಷ ಶಿವಣ್ಣ, ತೌಫಿಕ್ ಅಹಮದ್, ನಿಂಗರಾಜು, ಮಾಜಿ ಸದಸ್ಯರಾದ ಹರೀಶ್, ಸ್ನೇಕ್ ಬಾಬು, ಸಂತೋಷ್, ಸಂದೇಶ್, ಎ.ಹೆಚ್. ರಮೇಶ್, ಖಾಲಿದ್ ಪಾಷ, ಸರ್ವರ್ ಪಾಷ, ಮೂರ್ತಿ ಭಾಗವಹಿಸಿದ್ದರು.

# ಅಪ್ರಾಪ್ತೆಗೆ ಲೈಂಗಿಕ ದೌಜನ್ಯ: ಬಂಧನ

ಬೇಲೂರು: ತಾಲ್ಲೂಕಿನ ಅರೇಹಳ್ಳಿ ಪಟ್ಟಣದ ದೇವಸ್ಥಾನ ಬೀದಿಯಲ್ಲಿ ನೆಲೆಸಿರುವ ಅಸ್ಸಾಂ ಮೂಲದ ಕೂಲಿ ಕಾರ್ಮಿಕನೊಬ್ಬ ಪಕ್ಕದ ಮನೆಯ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಲೈಂಗಿಕ ದೌರ್ಜನ್ಯ ಎಸಗಿರುವ ಅಮಾನವೀಯ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಕಳೆದ ಎರಡು ವರ್ಷಗಳಿಂದ ಕೂಲಿ ಕೆಲಸ ನಿರ್ವಹಿಸಿಕೊಂಡು ಜೀವನ ಸಾಗಿಸುತ್ತಿದ್ದ ಮೇಘಾಲಯ ರಾಜ್ಯದ ಕುಟುಂಬವೊಂದರ ಸುಮಾರು

ಐದು ವರ್ಷದ ಅಪ್ರಾಪ್ತ ಹೆಣ್ಣು ಮಗುವನ್ನು ಸೈಯದ್ ಅಲಿ ಎಂಬಾತ, ಯಾರೂ ಇಲ್ಲದ ಸಮಯ ದುರುಪಯೋಗ ಪಡಿಸಿಕೊಂಡು ಲೈಂಗಿಕ ದೌಜನ್ಯ ಎಸಗಿದ್ದಾನೆ ಎಂದು ತಿಳಿದು ಬಂದಿದೆ.

ಆರೋಪಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದು, ಕಳೆದೆರಡು ತಿಂಗಳ ಹಿಂದಷ್ಟೇ ಕೂಲಿ ಕೆಲಸ ನಿಮಿತ್ತ ಪಟ್ಟಣಕ್ಕೆ ವಲಸೆ ಬಂದಿದ್ದ ಎನ್ನಲಾಗಿದೆ.

ಈ ಕೃತ್ಯ ಸ್ಥಳೀಯರಲ್ಲಿ ಆತಂಕ ತರಿಸಿದೆ. ಪೋಷಕರ ದೂರಿನ ಅನ್ವಯ ಅರೇಹಳ್ಳಿ ಪೊಲೀಸರು ಆರೋಪಿಯನ್ನು ವಶಪಡೆದು ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ ಆರೋಪಿಯನ್ನು ಜೈಲುಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248